as required under Section 323 (16) of the Karnataka Municipalities Act, 1964.

ಶ್ರೀ ಬೇಗಾನೆ ರಾಮಯ್ಯ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—೧೯೫೯ನೇ ಕರ್ನಾಟಕ ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಮಂಡಲಿಗಳ ಶಾಸನದ ೨೪೬ನೇ ಕಲಮಿನ ಮೇರೆಗೆ ಹೊರಡಿಸಿದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

MR. SPEAKER.—Papers laid.

CALLING ATTENTION TO MATTERS OF URGENT PUBLIC IMPORTANCE

re:–Seizure of 39 Purse–seine boats belonging to fishermen of Karnataka by the Kerala Government.

MR. SPEAKER.—Sriyuths. G. P. Vadayaraj, Mallur Ananda Rao, Harnahalli Ramaswamy, A. B. Patil, V. B. Bhavi, A. G. Kodgi, B. Subbaiah Shetty, P. Ananda Kunde Hegde, N. Bhasker Shetty and U. T. Fareed, to call the attention of the Chief Minister to seizure of 29 Purse–Seine boats belonging to fishermen of Karnataka by the Kerala Government.

ಶ್ರೀ ಎ. ಜಿ. ಕೊಡಗಿ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ,.....

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಮಂಡನೆಯಾದ ಮೇಲೆ ಹೇಳಿ.

SRI M. C. BASAPPA.—He is mentioning that some names have been called and some names have been deleted.

ಅಧ್ಯಕ್ಷರು.—ಅವರಿಗೆ ಅವಸರ. ಅವರು ಹೆಸರು ಹೇಳಲಿಲ್ಲವಲ್ಲ ಎಂದು ಎದ್ದಿದ್ದಾರೆ. ನಾನು ಓದುವಾಗ ಅವರ ಹೆಸರನ್ನು ಹೇಳಿದೆ.

SRI MALLUR ANANDA RAO.—Sir, I call the attention of the Chief Minister to the seizure of 29 Purse–seine boats belonging to fishermen of Karnataka by the Kerala Government.

SRI R. GUNDU RAO (Chief Minister).—Sir, I wish to make the following statement.

It has come to the notice of the Government that about 26 Purse-seine boats belonging to Fishermen of Karnataka State were seized on 2nd March 1981 at Cochin by the Kerala Government on the allegation that they have contravened the Kerala Marine Fishing Regulation Act, 1980. The incident is learnt to have taken place while the boats were fishing off the coast of Kerala near Cochin. The report that fish worth Rs. 2 Crores were in the boats is exaggerated. The value of the fish at best would be Rs. 2 to 3 lakhs.

The Government of Karnataka has taken up the matter with the Government of Kerala to secure release of these seized boats The

Director of Fisheries will also be proceedings to Cochin and Trivendrum for discussions with the Kerala Officers for securing early release of the fishing Boats.

ಶ್ರೀ ಬಿ. ಭಾಸ್ಕರ ಶೆಟ್ಟಿ —ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಕೆಲವು ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಇದಕ್ಕೆ ಸಂಬಂಧ ಪಟ್ಟಂಥ ಆಕ್ಟ್ ಪಾಸ್ ಆಗಿ ಸಾಧಾರಣಾ ನಾಲ್ಕೈದು ತಿಂಗಳಾಯಿತು, ನನ್ನ ಅನುಭವಕ್ಕೆ ಬಂದ ಹಾಗೆ ಫಿಷಿಂಗ್ ರೆಗ್ಯುಲೇಷನ್ ಆಕ್ಟ್ ೧೯೮೦ ಪಾಸಾಗಿ ನಾಲ್ಕೈದು ತಿಂಗಳಾಯಿತು. ಅಲ್ಲಿ ಮೀನುಗಾರರು ಜನವರಿಯಿಂದ ಮೀನುಗಾರಿಕೆ ಮಾಡುತ್ತಿದ್ದಾರೆ. ಆದರೂ ಆಗಿನಿಂದ ಏನೂ ಕ್ರಮ ತೆಗೆದು ಕೊಳ್ಳದೇ ಈಗ ತೆಗೆದುಕೊಂಡಿದ್ದಾರೆಂದರೆ ದುರುದ್ದೇಶಪೂರ್ವಕವಾಗಿ ಕರ್ನಾಟಕದ ಮೇಲೆ ವೈರಾಗ್ಯ ದಿಂದ ಈ ಕೆಲಸವನ್ನು ಮಾಡಿರಬಹುದು. ಇಲ್ಲದಿದ್ದರೆ ಹಿಂದೆಯೇ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಮೂರು ನಾಲ್ಕು ತಿಂಗಳ ಅವಧಿಯಲ್ಲಿ.....

ಶ್ರೀ ಕೆ. ಬಿ. ಶಿವಯ್ಯ.—ವೈರಾಗ್ಯದಿಂದಲೋ, ವೈರತ್ವದಿಂದಲೋ ?

ಶ್ರೀ ಬಿ. ಬಾಸ್ಕರ ಶೆಟ್ಟಿ..—ವೈರಾಗ್ಯ, ವೈರತ್ವ ಎಲ್ಲಾ ಒಂದೇ ಅಲ್ಲವೇ ?

ಶ್ರೀ ಶೀರ್ನಾಳಿ ಚಂದ್ರಶೇಖರ್.—ಹಾಗಾದರೆ ಹೊಸ ಕನ್ನಡ ನಿಘಂಟು ಬರೆಯಬೇಕು

ಶ್ರೀ ಬಿ. ಬಾಸ್ಕರ ಶೆಟ್ಟಿ.—ನಮ್ಮ ಕನ್ನಡಕ್ಕೂ ಅವರ ಕನ್ನಡಕ್ಕೂ ಸ್ವಲ್ಪ ವ್ಯತ್ಯಾಸವಿರ ಬಹುದು.

ಶ್ರೀ ಎಂ. ಸಿ. ನಾಣಯ್ಯ—ಕನ್ನಡದಲ್ಲಿ ಬೇರೆ ಬೇರೆ ಅರ್ಥ ಇಲ್ಲ, ಎಲ್ಲಾ ಒಂದೆ ಇರುವುದು.

ಶ್ರೀ ಬಿ. ಬಾಸ್ಕರ ಶೆಟ್ಟಿ.—ಅದೇನೇ ಇರಲಿ, ಇದೊಂದು ದುರುದ್ದೇಶಪೂರ್ವಕವಾದ ಕೆಲಸವನ್ನು ಕೆಲಸವನ್ನು ಕೇರಳ ಸರ್ಕಾರದವರೂ ಮಾಡಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಸಾಧಾರಣ ಎರಡು ಮೂರು ಲಕ್ಷ ರೂಪಾಯಿಯ ಮೀನುಗಳನ್ನು ಅವರು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಎರಡು ಮೂರು ಲಕ್ಷ ರೂಪಾಯಿ ಮೀನು ಎಂದರೆ ನಮ್ಮ ಬಡ ಮೀನುಗಾರರಿಗೆ ದೊಡ್ಡ ಮೊತ್ತವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಏನಾದರೂ ಪರಿಹಾರ ಕೊಡುತ್ತಾರೆಯೇ ? ಅಥವಾ ಮೀನನ್ನು ಕೂಡಲೇ ಮಾರುಕಟ್ಟೆಯಲ್ಲಿ ಮಾರುವ ಹಾಗೆ ವ್ಯವಸ್ಥೆ ಮಾಡಿದ್ದಾರೆಯೇ ? ಇದನ್ನು ತಿಳಿಸಬೇಕು.

ಶ್ರೀ ಎ. ಜಿ. ಕೊಡಗಿ(ಬೈಂದೂರು).— ಮಾನ್ಯ ಅಧ್ಯಕ್ಷರೇ, ಕೇರಳ ರಾಜ್ಯದಲ್ಲಿ ಒಂದು ಸುಗ್ರೀವಾಜ್ಞೆ ಜಾರಿಯಲ್ಲಿದೆ, ಅದಕ್ಕೆ ತದ್ವಿರುದ್ಧವಾಗಿ ನಮ್ಮ ಮೀನುಗಾರರು ಹೋಗಿದ್ದಾರೆ, ಆದುದರಿಂದ, ಅವರನ್ನೂ ಮತ್ತು ಅವರ ದೋಣಿಗಳನ್ನು ಕೇರಳ ಸರ್ಕಾರ ಹಿಡಿದಿದೆ. ಈ ವಿಷಯದಲ್ಲಿ ಕೇರಳ ಸರ್ಕಾರದೊಂದಿಗೆ ವ್ಯವಹಾರ ಮಾಡಿ ಮೀನುಗಾರರನ್ನು ಬಿಡಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಸೂಕ್ಷ್ಮವಾಗಿ ಸರ್ಕಾರ ನೀಡಿರುವ ಹೇಳಿಕೆಯಿಂದ ಗೊತ್ತಾಗುತ್ತದೆ. ಇಲ್ಲಿ ಎರಡು ಮೂರು ಪ್ರಶ್ನೆಗಳು ಉದ್ಭವವಾಗುತ್ತವೆ. ಒಂದನೆಯದಾಗಿ, ಕೇರಳ ಸರ್ಕಾರಕ್ಕೆ ಇಂತಹ ಒಂದು ಹೊಸ ಸುಗ್ರೀವಾಜ್ಞೆಯನ್ನು ಹೊರಡಿಸುವ ಅಧಿಕಾರವಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಬೇಕಾಗುತ್ತದೆ. Marine Products and Exports Development Authority ಎಂದು ಒಂದು ಕಾನೂನು ಕೇಂದ್ರ ಸರ್ಕಾರದಲ್ಲಿದೆ. ಅದು ಇಡೀ ಹಿಂದೂ ಸ್ಥಾನದ ಎಲ್ಲ ಪ್ರದೇಶಗಳಿಗೂ ಅನ್ವಯವಾಗುತ್ತದೆ. ಈಗ ನಾವು ಇದರ ಅನ್ವಯ ನಡೆಯಬೇಕೆ ಅಥವಾ ಇದಕ್ಕೆ ವಿರುದ್ಧವಾಗಿ ಹೊಸ ಶಾಸನಗಳನ್ನು ರಾಜ್ಯ ಸರ್ಕಾರಗಳು ಮಾಡುವುದಕ್ಕೆ ಅವಕಾಶ ವಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಎರಡನೆಯದಾಗಿ, ಹೊಸ ಸುಗ್ರೀವಾಜ್ಞೆಯ ಪ್ರಕಾರ ನಮ್ಮ ಮೀನುಗಾರರು ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆಯೆ ? ಈ ಕಾನೂನು ಜಾರಿಗೆ ಬಂದ ಮೂರು ತಿಂಗಳೊಳಗೆ ಮೀನುಗಾರರು ತಮ್ಮ ಹೆಸರುಗಳನ್ನು ದಾಖಲೆ ಮಾಡಿಸಿ, ಅನುಮತಿ ಪಡೆಯಬೇಕೆಂಬ ವಿಧಿ ಕಾನೂನಿನಲ್ಲಿದೆ. ಇದರ ಜೊತೆಗೆ. ಬೇರೆ ಕಡೆಗಳಿಂದ ಪರ್ಸೀನ್ ದೋಣಿಗಳಲ್ಲಿ ಯಾರಾದರೂ ಬಂದರೆ ಅವರು ಬಂದ ಒಂದು ತಿಂಗಳೊಳಗೆ ರಿಜಿಸ್ಟರ್ ಮಾಡಿಸಿ ಅನುಮತಿ ಪಡೆಯ

ಬೇಕೆಂದು ಕಾನೂನು ಇದೆ ಎಂದು ನನ್ನ ತಿಳುವಳಿಕೆ ಬಂದಿದೆ. ಹೀಗಿದ್ದು. ರಿಜಿಸ್ಟರ್ ಮಾಡಿಸಿ ಅನುಮತಿ ಪಡೆಯುವುದಕ್ಕೆ ಅವಕಾಶ ಕೊಡದೆ ಮೀನುಗಾರರನ್ನು ಹಿಡಿದಿಟ್ಟಿರುವುದು ಕಾನೂನು ಉಲ್ಲಂಘನೆಯಲ್ಲವೆ ? ಕರ್ನಾಟಕ ಸರ್ಕಾರ ಈ ದಿಸೆಯಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತದೆ ? ಈ ವಿಚಾರದಲ್ಲಿ ಪತ್ರಿಕೆಗಳಲ್ಲಿ ಬಂದಿರುವ ವರದಿ ಸ್ವಲ್ಪ ಸರಿಯಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಸಂಬಂಧಪಟ್ಟ ಪತ್ರಿಕೆಯ ಪ್ರತಿನಿಧಿಗಳು ಸರಿಪಡಿಸಿ ಬೇರೆ ರೀತಿಯಲ್ಲಿ ತಿಳಿಸಬಹುದು. ಕೇರಳ ಸರ್ಕಾರದವರು ಮೀನುಗಾರರನ್ನು, ಅವರು ಬಂದರಿನಲ್ಲಿದ್ದಾಗ ಬಂಧಿಸಿದರೆ ಅಥವಾ ಮೀನು ಹಿಡಿಯುತ್ತಿದ್ದಾಗ ಬಂಧಿಸಿದರೆ ? ಪರ್ಸಿನ್ ದೋಣಿಗಳ ಜೊತೆಗೆ ಸುಮಾರು ಐವತ್ತೈರಡು ನಾಡ ದೋಣಿಗಳನ್ನೂ ಹಿಡಿದಿದ್ದಾರೆ. ಇದೂ ಕೂಡ ಕಾನೂನಿಗೆ ಒಳಪಟ್ಟಿದೆಯೇ ಎನ್ನುವುದು ಸೃಷ್ಟೀಕರಣ ವಾಗಬೇಕು. ಆ ಕಾನೂನಿನಲ್ಲಿ ಇಂತಿಷ್ಟು ಪ್ರದೇಶವೆಂದು ನಿಗದಿ ಮಾಡಿದ್ದಾರೆ, ಹಾಗೆ ನಿ ದಿಗೊಳಿಸಿದ ಪ್ರದೇಶದಲ್ಲಿ ನಮ್ಮ ದೋಣಿಗಳನ್ನು ಹಿಡಿದಿರುವರೆ ? ಇಂದು ಸುಮಾರು ೬೫೦ ಜನ ಮೀನುಗಾರಿಕೆಯಲ್ಲಿ ಅಲ್ಲಿ ತೊಡಗಿದ್ದಾರೆ. ಅವರಲ್ಲಿ ಕೇರಳದವರೇ ಸುಮಾರು ಶೇಕಡ ಐವತ್ತರಷ್ಟು ಜನರಿದ್ದಾರೆ. ಉಳಿದವರು ನಮ್ಮವರು. ನಮ್ಮ ರಾಜ್ಯದ ಮೀನುಗಾರರನ್ನು ಈ ತಿಂಗಳ ೨ನೇ ತಾರೀಖಿನಿಂದು ಬಂಧಿಸಿದ ಮೇಲೆ ೬೫೦ ಜನ ಮೀನುಗಾರರಿಗೆ ಉದ್ಯೋಗವಿಲ್ಲದಂತಾಗಿದೆ. ಅಲ್ಲದೆ, ಇಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಹಣ ನಷ್ಟ ವಾಗಿದೆ. ಮೀನುಗಾರಿಕೆ ಇಲಾಖೆಯ ನಿರ್ದೇಶಕರು ಅಲ್ಲಿಗೆ ಹೋಗಿ ವಿಷಯವನ್ನು ಪರಿಶೀಲಿಸುತ್ತಾರೆಂದು ತಿಳಿದು ತೃಪ್ತಿಪಟ್ಟುಕೊಳ್ಳಬಾರದು. ನಮ್ಮ ನಮ್ಮ ರಾಜ್ಯದ ೬೫೦ ಮಂದಿ ಮೀನುಗಾರರಿಗೆ ಉದ್ಯೋಗ ಬೇಕಾಗಿದೆ, ಅದನ್ನು ನಮ್ಮ ಸರ್ಕಾರ ಪರಿಶೀಲನೆ ಮಾಡಬೇಕಾಗಿದೆ. ಈಗ ಹಿಡಿದಿರುವ ಮೀನುಗಾರರನ್ನು ಮತ್ತು ದೋಣಿಗಳನ್ನು ಕೇರಳ ಸರ್ಕಾರ ಬಿಡಬಹುದು. ಮತ್ತೆ ಈ ಮೀನುಗಾರರು ಎಲ್ಲಿ ಹೋಗಿ ಮೀನು ಹಿಡಿಯಬೇಕು ? ಮೀನುಗಾರಿಕೆ ಯಾರ ಸ್ವತ್ತೂ ಅಲ್ಲ. ನಮ್ಮ ಅಡಕೆ ತೋಟಕ್ಕೆ ಇನ್ನೊಬ್ಬ ಅಡಕೆ ತೋಟದವನು ಬಂದು ಅಡಕೆ ಕೊಯ್ದ ಎನ್ನುವ ರೀತಿಯಲ್ಲ ಇದು. ಕರ್ನಾಟಕದ ಮೀನುಗಾರರು ಕೇರಳದ ಕರಾವಳಿಗೆ ಹೋಗಿ ಮೀನು ಹಿಡಿಯುತ್ತಾರೆ, ಕೇರಳದ ಮೀನುಗಾರರು ಕರ್ನಾಟಕದ ಕರಾವಳಿಗೆ ಬಂದು ಮೀನು ಹಿಡಿಯುತ್ತಾರೆ.

ಅಧ್ಯಕ್ಷರು.—ಕೇರಳದ ದೋಣಿಗಳು ನಮ್ಮ ಕರಾವಳಿ ಪ್ರದೇಶಕ್ಕೆ ಬಂದು ಮೀನುಗಳನ್ನು ಹಿಡಿಯುತ್ತಿರುವವರೆ?

ಶ್ರೀ ಎ. ಜಿ. ಕೊಡಗಿ.—ಹೌದು, ಹಿಡಿಯುತ್ತಿದ್ದಾರೆ. ಅದನ್ನೇ ನಾನು ಹೇಳುತ್ತಿರುವುದು. ಕೇರಳದ ಜನ.....

ಅಧ್ಯಕ್ಷರು.—ಹಾಗಾದರೆ, ಅವರು ನಾಳೆ ಬರುತ್ತಾರೆ.

ಶ್ರೀ ಎ. ಜಿ. ಕೊಡಗಿ.—ಈಗಲೂ ಇದ್ದಾರೆ, ಸ್ವಾಮಿ.

ಅಧ್ಯಕ್ಷರು,—ಮಾನ್ಯ ಸದಸ್ಯರು ಇದನ್ನು ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ.

ಶ್ರೀ ಎ. ಜಿ. ಕೊಡಗಿ.—ಇರುವ ವಿಚಾರವನ್ನು ಮರೆ ಮಾಚುವುದಕ್ಕಾಗುವುದಿಲ್ಲ.

MR. SPEAKER.—I do not know whether you understand my point.

SRI A. G. KODAGI,—I understand your point.But there is no restriction. Definitely there is no restriction in Karnataka. It is what is happening.

MR. SPEAKER.—Then you want to open the gates ?

SRI A G. KODAGI.—Yes, it is opend.

MR. SPEAKER.—I am really sorry for you. You are not protecting the interests of the State.

SRI A. G. KODAGI.—It is not the question of protecting the interests of the State. It is a representation given to the Chief Minister.

MR. SPEAKER.—I would request the Deputy Leader of Opposition to appraise the hon. Member. What is the point in becoming emotional ? This is a matter between State and State. I would request the Press not to publish that aspect.

ಶ್ರೀ ಎ. ಜಿ. ಕೊಡಗಿ.—ತಮ್ಮ ಉದ್ದೇಶ ನನಗೆ ಅರ್ಥವಾಗುತ್ತಿದೆ. ನಮ್ಮ ಮೀನುಗಾರರು ಪುನಃ ಕೇರಳದ ಕರಾವಳಿ ಪ್ರದೇಶಕ್ಕೆ ಹೋಗಿ ಮೀನು ಹಿಡಿಯುವುದಕ್ಕೆ ಅವಕಾಶ ಒದಗಿಸಿಕೊಡಬೇಕಾಗುತ್ತದೆ. ಎಲ್ಲ ಕಡೆಗೂ ಮೀನುಗಾರರು ಹೋಗಿ ಮೀನು ಹಿಡಿಯುವುದಕ್ಕೆ ಈಗಾಗಲೇ ಅವಕಾಶವಿದೆ. ಈ ಅವಕಾಶವನ್ನು ಇನ್ನು ಮುಂದೆ ಕರ್ನಾಟಕ ಮೀನುಗಾರರಿಗೆ ಒದಗಿಸಿಕೊಡುವ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಮತ್ತು ಕಾನೂನು ಅಂಶವನ್ನು ಪರಿಶೀಲಿಸಿ ಸೂಕ್ತ ವ್ಯವಸ್ಥೆ ಮಾಡಬೇಕಾಗಿದೆ. ನಮ್ಮ ಸರ್ಕಾರದ ಸ್ಪಷ್ಟ ಅಭಿಪ್ರಾಯವನ್ನು ಕೇರಳ ಸರ್ಕಾರದ ಗಮನಕ್ಕೆ ತಂದು ಈ ಕೂಡಲೇ ಹಿಂಡಿಟ್ಟಿರುವ ಮೀನುಗಾರರು ಮತ್ತು ದೋಣಿಗಳನ್ನು ಬಿಡುಗಡೆ ಮಾಡಿಸಿ, ಆಗಿರುವ ನಷ್ಟಕ್ಕೆ ಪರಿಹಾರ ದೊರಕಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆಯಲ್ಲಿ ಇನ್ನೂ ಕೆಲವು ವಿವರಗಳನ್ನು ಸೇರಿಸಿದ್ದರೆ ಚೆನ್ನಾಗಿರುತ್ತಿತ್ತೆಂದು ನನಗನ್ನಿಸುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ನೀಡಿದ ವಿವರಗಳು ಸರ್ಕಾರದ ನುಟ್ಟದಲ್ಲಿ ಪಡೆದವುಗಳಾಗಿರಬಹುದು: ಕೇರಳ ಸರ್ಕಾರದ ಅಧಿಕಾರಿಗಳ ಸಂಪರ್ಕ ಮಾಡಿ ಪಡೆದ ವಿವರಗಳಾಗಿರಬಹುದು. ಆದರೆ, ವಸ್ತುಸ್ಥಿತಿ ಏನು ನಡೆಯಿತು ? ನಮ್ಮ ರಾಜ್ಯದ ಮೀನುಗಾರರನ್ನು ಮೀನು ಹಿಡಿಯುತ್ತಿದ್ದಾಗ ಬಂಧಿಸಿದರೆ ? ಅಥವಾ ಬಂದರಿಗೆ ಹೋದಾಗ ಬಂಧಿಸಿದರೆ ? ಈ ವಿವರಗಳನ್ನು ನಮ್ಮಲ್ಲಿರುವ ಮೂಲಗಳಿಂದಲೇ ತರಿಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಎರಡನೆಯದಾಗಿ, Fishing Regulation Act, 1980 ಅನ್ನು ೧೯೮೦ ರಲ್ಲಿ ಜಾರಿಗೆ ತರಲಾಗಿದೆ, ಸಾಮಾನ್ಯವಾಗಿ ಮೀನುಗಾರರು ಸಮುದ್ರದಲ್ಲಿ ಮೀನು ಹಿಡಿಯುವುದಕ್ಕೆ ಹೋಗಿಬರಬೇಕಾದರೆ ಹಿಂದಿನಿಂದ ನಡೆದುಕೊಂಡು ಬಂದ ಒಂದು ಪದ್ಧತಿ ಇರುತ್ತದೆ. ಅವರೇನು ವಿಧಿನಿಯಮಗಳನ್ನು ಅಷ್ಟು ಅಭ್ಯಾಸ ಮಾಡಿರುವುದಿಲ್ಲ. ಈ ಕಾನೂನಿನ ಅರಿವಿಲ್ಲದೆ ಹಿಂದಿನಿಂದ ಬಂದ ಪದ್ಧತಿ ಪ್ರಕಾರ ಮೀನು ಹಿಡಿಯಲು ಹೋಗಿದ್ದ ಮೀನುಗಾರರನ್ನು ಅವರು ಬಂಧಿಸಿದರೆ ಎನ್ನುವುದನ್ನು ನಾವು ವಿಚಾರ ಮಾಡಬೇಕು. ಈ ಕಾನೂನನ್ನು ಜಾರಿಗೆ ತಂದ ಕೇರಳ ಸರ್ಕಾರ, ಅವನ್ನು ಮೀನುಗಾರರಿಗೆ ಗೊತ್ತಾಗುವ ಹಾಗೆ ಪ್ರಚಾರ ಮಾಡಿದ್ದಾರೆಯೆ? ಇನ್ನೊಂದು ವಿಚಾರ. ನಾನು ಕಾನೂನು ತಜ್ಞನಲ್ಲ. ನನಗೆ ಕಾನೂನು ವಿಚಾರ ಅಷ್ಟಾಗಿ ಗೊತ್ತಿಲ್ಲ. ನಾವೆಲ್ಲ ಭಾರತದ ಒಕ್ಕೂಟಕ್ಕೆ ಸೇರಿದವರು. ನಮ್ಮ ರಾಷ್ಟ್ರದ ವ್ಯಾಪ್ತಿಗೆ ಬರುವ ಸಮುದ್ರವೂ ಭಾರತದ ಒಕ್ಕೂಟಕ್ಕೆ ಸೆರಿದೆ, ಒಂದೊಂದು ರಾಜ್ಯದಲ್ಲಿ ಇಷ್ಟೇ ವಿತಿಯಲ್ಲಿ ಮೀನು ಹಿಡಿಯಬೇಕೆಂದು ಕಾನೂನಿದೆಯೆ ? Kerala Marine Fishing Regulation Act 1980 ಜಾರಿಗೆ ಬಂದ ಮೇಲೆ ನಮ್ಮ ರಾಜ್ಯದ ಮೀನುಗಾರರು ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಿಲ್ಲವೆ ? ಕಾನೂನಿನ ತೊಡಕು ಇದೆಯೆ ? ಇಂತಹ ವಿಚಾರಗಳಲ್ಲಿ ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದ ಮೇಲೆ ದಿಗ್ಬಂಧನ ಹಾಕುವ ರೀತಿ ಕೇರಳ ಸರ್ಕಾರದವರು ನಮ್ಮ ಸರ್ಕಾರದವರು ನಮ್ಮ ಸರ್ಕಾರದ ಮೇಲೆ ದಿಗ್ಬಂಧನ ಹಾಕುವುದಕ್ಕೆ ಸಾಧ್ಯವಿದೆಯೆ ? ಅದೇ ರೀತಿ ನಾವೂ ಕೂಡ ಅವರಿಗೆ ದಿಗ್ಬಂಧನ ಹಾಕಬಹುದಲ್ಲವೆ ? ಈ ವಿಚಾರವನ್ನೆಲ್ಲ ಸರ್ಕಾರ ಪರಿಶೀಲನೆ ಮಾಡಬೇಕು. ಇಂದು ಹಿಡಿಟ್ಟಿರುವ ಮೀನುಗಾರರ ಸ್ಥಿತಿ ಏನಾಗಿದೆ ? ಅವರನ್ನು ಬಿಡುಗಡೆ ಮಾಡಿಸಲು ಏನಾದರೂ ಪ್ರಯತ್ನ ಮಾಡಿದ್ದೀರಾ ? ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸುವುದನ್ನು ಬಿಟ್ಟು ಇನ್ನೇನನ್ನಾದರೂ ಮಾಡಿದ್ದೀರಾ? ನಮ್ಮ ರಾಜ್ಯದ ಮೀನುಗಾರರು ಮತ್ತು ದೋಣಿಗಳು ವಾಪಸ್ಸು ಬರಲು ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಯು. ಟಿ. ಫರೀದ್.—ಎರಡನೇ ತಾರೀಖಿನ ಈ ಒಂದು ಘಟನೆ ನಡೆಯಿತು. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಡೈರೆಕ್ಟರ್ ಹೋಗುತ್ತಾರೆಂದು ಹೇಳಿದ್ದಾರೆ, ೧೧ ದಿವಸದ ಒಳಗೆ ಸಂಬಂಧಪಟ್ಟ ಅಧಿಕಾರಿಗಳು ಕೇರಳ ಸರ್ಕಾರದೊಡನೆ ಸಂಬಂಧಪಟ್ಟಿಸಿ ಇತ್ಯರ್ಥಕ್ಕೆ ತರಬಹುದಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಇದುವರೆಗೆ ಫಿಷರೀಸ್ ಡೈರೆಕ್ಟರ್ ಯಾವ ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಲಿಲ್ಲ. ದೋಣಿಗಳನ್ನು ಸೀಸ್ ಮಾಡಿ; ಸಂಬಂಧಪಟ್ಟ ಜನರನ್ನು ಏನು ಮಾಡಿದ್ದಾರೆ. ಬಿಟ್ಟಿದ್ದಾರೆಯೇ ಹೇಗೆ ಎನ್ನುವುದನ್ನು ಹೇಳಲಿಲ್ಲ. ಸುಮಾರು ೨–೩ ಲಕ್ಷ

ರೂಪಾಯಿ ಲಾಸಾಗಿದೆ. ಆಗಿರತಕ್ಕ ನಷ್ಟವನ್ನು ಕೇರಳ ಸರ್ಕಾರ ಕೊಡುತ್ತದೆಯೇ ? ಈ ಸರ್ಕಾರ ಕೊಡುತ್ತದೆಯೇ ಎನ್ನುವ ಬಗ್ಗೆ ವಿವರಣೆ ಕೊಡಲಿಲ್ಲ, ಕಾರವಾರ, ಮಂಗಳೂರು, ಮುತ್ತು ಮಲ್ಪೆ ಬಂದರಿನಿಂದ ಹಿಡಿಯುತಕ್ಕ ಮೀನು ಹೆಚ್ಚಿಗೆ ಹೋಗತಕ್ಕದ್ದು ಕೊಚ್ಚಿನ್‌ಗೆ. ಅವರು ಅಡ್ಡಿ ಆತಂಕಗಳು ಮಾಡಿದರೆ ಅವರಿಗೆ ತೊಂದರೆಯಾಗುತ್ತದೆ ಎಂದು ನನಗನಿಸುತ್ತದೆ: ೨೨ ಕಿಲೋಮೀಟರ್ ದೂರಾಗಿ ಹೋಗಿಲ್ಲ ? ಕರಾವಳಿಯಲ್ಲಿದ್ದಂತ ದೋಣಿಗಳನ್ನು ಕಾನೂನಿಗೆ ವಿರುದ್ಧವಾಗಿ ಹಿಡಿದಿದ್ದಾರೆಂದು ಗೊತ್ತಾಗುತ್ತದೆ. ನನ್ನ ಗಮನಕ್ಕೆ ಬಂದಂತೆ ದೋಣಿಗಳನ್ನು ರಿಜಿಸ್ಟ್ರೇಷನ್ ಮಾಡಿಕೊಡಿ ಎಂದು ಕೇಳಿದ್ದಕ್ಕೆ ? ಅಲ್ಲಿನ ಅಧಿಕಾರಿಗಳು ನಾವು ಎಷ್ಟೋ ಮಾತ್ರಕ್ಕೂ ರಿಜಿಸ್ಟ್ರೇಷನ್ ಕೊಡುವುದಕ್ಕಾಗುವುದಿಲ್ಲ ? ಮುಂದೆ ಕೇರಳ ತೀರದ ಕಡೆ ಬರುವುದಿಲವೆಂದು ಮುಚ್ಚಳಿಕೆ ಬರೆದುಕೊಡಿ ಎಂದು ಕೇಳಿದ್ದಾರೆಂದು ಗೊತ್ತಾಗಿದೆ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗಿ ಸ ತಃ ಕಸಬು ಮಾಡತಕ್ಕವರ ಮೇಲೆ ಆತಂಕ ಒಡ್ಡಿದ ಹಾಗೆ ಆಗುತ್ತದೆ. ಇದರ ಬಗ್ಗೆ ಆದಷ್ಟು ಬೇಗ ಕೇರ ಸರ್ಕಾರದೊಡನೆ ಮಾತು ಕತೆ ನಡೆಸಿ ಒಂದು ಒಳ್ಳೆಯ ವಾತಾವರಣಕ್ಕೆ ಬರಬೇಕೆಂದು ಹೇಳುತ್ತೇನೆ, ಇಲ್ಲದೆಹೋದರೆ ಮುಂದೆ ಇದರಿಂದ ಒಳ್ಳೆಯ ಬೆಳವಣಿಗೆಗಳು ಆಗುವುದಿಲ್ಲವೆಂದು ನನಗೆ ಭಾಸವಾಗುತ್ತದೆ.

ಶ್ರೀ ಆನಂದ ಕುಂದಗಡೆ.—ಸ್ವಾಮಿ, ನಡೆದಂತ ಘಟನೆ ಘಾತುಕ ಸ್ಪರ್ಧೆಯ ಮತ್ಸರ ಎಂದು ನಾನು ಭಾವಿಸಿಕೊಂಡಿದ್ದೇನೆ, ಅರಬ್ಬೀ ಸಮುದ್ರದಲ್ಲಿ ಹೊರ ದೇಶಗಳವರಲ್ಲದೆ: ನಮ್ಮ ತಾತಾ ಬಿರ್ಲಾ ಕಂಪನಿಯವರು ಮೀನುಗಳನ್ನು ಹಿಡಿದು ಸಂಗ್ರಹಿಸುತ್ತಿದ್ದಾರೆ. ನಮ್ಮ ನಾಡ ಮೀನುಗಾರಿಕೆಯಲ್ಲಿ ಆದರಲ್ಲಿಯೂ ಪರ್ಸೀನ್ ಬೋಟುಗಳಲ್ಲಿ ಹಿಡಿದಂತ ಮೀನುಗಳನ್ನು ಆ ದಿನವೇ ದಡಕ್ಕೆ ತರಬೇಕು; ಇದು ನೈಸರ್ಗಿಕ ವಾದಂತಾದ್ದು; ಇದನ್ನು ನಮ್ಮ ಸರ್ಕಾರ ಗಮನಿಸಬೇಕು, ಏಕೆಂದರೆ, ದಕ್ಷಿಣದಿಂದ ಉತ್ತರಕ್ಕೆ ಮೀನು ಬರುವಾಗ, ಕೆಲವರು ದಕ್ಷಿಣಕ್ಕೆ ಹೋಗುವುದು ಸ್ವಾಭಾವಿಕವಾದ ಹಕ್ಕು. ಇದನ್ನು ಉದ್ದೇಶಪೂರ್ವಕವಾಗಿ ಸ್ಪರ್ಧಾ ಮತ್ಸರದಿಂದ ನಡೆಸಿದ್ದಾರೆ. ಇಲ್ಲಿ ಕಾನೂನು ಪ್ರಶ್ನೆಯೇ ಬರುವುದಿಲ್ಲ. ಮುಚ್ಚಳಿಕೆ ಬರೆದುಕೊಡುವಂತಾದ್ದು ಏನೂ ಇಲ್ಲ. ನಮ್ಮ ಅರಬ್ಬೀ ಸಮುದ್ರದಲ್ಲಿ ಇರುವಷ್ಟು ಮೀನು ಬೇರೆ ಯಾವ ಭಾಗದಲ್ಲಿಯೂ ಇಲ್ಲ: ತಮಿಳುನಾಡಿನವರು ಕೂಡ ಬಂದು ಮೀನು ಹಿಡಿಯುತ್ತಾರೆ. ನಮಗೆ ಗಡಿ ಸಮೀಪ ಇದೆ; ಆದರೂ ಗಡಿ ಸಮಸ್ಯೆ ಆಕ್ಷೇಪ ಇಲ್ಲ. ನನ್ನ ಕ್ಷೇತ್ರದಲ್ಲಿಯೇ ೧೬ ಪರ್ಸೀನ್ ಬೋಟುಗಳಿವೆ. ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಘಟನೆಯ ಪೂರ್ಣ ವಿವರವನ್ನು ಕೊಟ್ಟಿಲ್ಲ; ಮುಂದೆ ಕೊಡುತ್ತಾರೆಂದು ನಾನು ಭಾವಿಸಿದ್ದೇನೆ. ಒಂದು ದಿವಸಕ್ಕೆ ೩ ಲಕ್ಷ ರೂಪಾಯಿ ನಷ್ಟವಾದರೂ ಕೂಡ ೮ ದಿವಸಕ್ಕೆ ಸುಮಾರು ೨೫ ಲಕ್ಷ ರೂಪಾಯಿ ನಷ್ಟವಾಗುತ್ತೆ. ಈ ವಿಚಾರದಲ್ಲಿ ನಮ್ಮ ಸರ್ಕಾರ ಕೇಂದ್ರ ಸರ್ಕಾರದೊಡನೆ ಮಾತುಕತೆ ನಡೆಸಿ, ಮುಂದೆ ಇಂಥ ತೊಂದರೆಬರದಂತೆ ತಕ್ಕ ವ್ಯವಸ್ಥೆ ಮಾಡಬೇಕಲ್ಲದೆ, ಆಗಿರತಕ್ಕ ನಷ್ಟದ ಬಗ್ಗೆ ಸೂಕ್ತ ಗಮನ ಹರಿಸಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

SRI V. B. BHAVI (Mundargi).—Speaker Sir, looking to the seriousness of the situation, the answer given by the Chief Minister is no so satisfactory. Because when the situation is very serious and as a matter of fact basically, every citizen is given protection in our Constitution under Art. 19. (1) (g)

> "All the cisizens shall have the right to practise any rofession, or to carry on any occupation, trade or business"

This is very clear case of infringement of the right of a person who is carrying out his business in the State of Karnataka by the Kerala Government and f think the Kerala Government has no right to decide the territorial waters problem and it is controlled by international law and is vested with our Central Government. They cannot make any law. I think there is an ulterior motive of the Kerala Government in this matter. The Hon. Chief Minister should

investigate the matter very seriously and submit a report to the Central Government to take serious action and go to the extent of dissolving that government itself.

MR. SPEAKER.--The Government has taken up the matt

SRI V. B. BHAVI.—The answer is not satisfactory.

MR. SPEAKER.—Some time later, some more information may be available.

SRI BHAVI.—Then let the Chief Minister reply.

ಶ್ರೀ ಬಿ.ವಿ. ಕಕ್ಕಿಲಾಯ.—ರೆಗ್ಯೂಲೇಷನ್ ಆಕ್ಟ್ ಬಗ್ಗೆ ಹೇಳಿದ್ದಾರೆ. ಕಾನೂನಿನಲ್ಲಿರತಕ್ಕದ್ದು, ಯಂತ್ರಗಳನ್ನು ಉಪಯೋಗಿಸತಕ್ಕ ಪರ್ಸಿನ್ ಬೋಟುಗಳು ಕರಾವಳಿ ಸಮೀಪದಲ್ಲಿ ಮೀನು ಹಿಡಿಯಬಾರದೆಂದು ಇದೆ. ಕರಾವಳಿ ಸಮೀಪದಲ್ಲಿ ಇವರು ಹೋಗಿ ಮೀನು ಹಿಡಿದರೆ, ಸಣ್ಣ ಮೀನುಗಾರರಿಗೆ ತೊಂದರೆಯಾಗುತ್ತದೆಂದು, ಕರಾವಳಿ ಸಮೀಪದಲ್ಲಿ ಮೀನು ಹಿಡಿಯುವುದಕ್ಕೆ ಅವಕಾಶ ಕೊಡಕೂಡದೆಂದು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಕೂಡ ಇಂಥಾದ್ದೇ ಒಂದು ಕಾನೂನು ಮಾಡಬೇಕೆಂದು ಹಿಂದೆ ಕೇಳಿಕೊಂಡಿದ್ದೆವು, ಸರ್ಕಾರ ಒಪ್ಪಿಕೊಂಡಿದ್ದರೂ ಇದುವರೆಗೆ ಕಾನೂನು ಆಗಲಿಲ್ಲ. ಪರ್ಸಿನ್ ಬೋಟ್ ನವರು ಎಲ್ಲಿ ಮೀನು ಹಿಡಿದರು? ಇದರ ಇರತಕ್ಕ ಪ್ರಶ್ನೆ, ಇಲ್ಲಿ ಕರ್ನಾಟಕ ಮತ್ತು ಕೇರಳ ಪ್ರಶ್ನೆ ಬರುವುದಿಲ್ಲ. ನಾನು ಈ ವಿಚಾರದಲ್ಲಿ ಸತ್ಯ ತಿಳಿಯಬೇಕೆಂದು ಕೇರಳ ಸರ್ಕಾರದ ಇರಿಗೇಷನ್ ಮಂತ್ರಿಯವರಿಗೆ ಟ್ರಂಕಾಲ್ ಮಾಡಿದೆ; ಲೈನ್ ಕ್ಲಿಯರ್ ಇರಲಿಲ್ಲ. ಮೀನುಗಾರರಿಗೆ ಏನು ತೊಂದರೆ ಕೊಟ್ಟಿದ್ದಾರೆ ಇದನ್ನು ಖಂಡನೆ ಮಾಡಲೇ ಬೇಕಾಗುತ್ತದೆ. ಆದರೆ ಇರತಕ್ಕ ವಿಚಾರವನ್ನು ಮೊದಲು ತಿಳಿದುಕೊಳ್ಳುವುದು ಒಳ್ಳೆಯದಲ್ಲವೆ? ಇಲ್ಲಿ ಒಂದು ವೇಳೆ ಭಾಷೆ ಪ್ರಶ್ನೆ ಉದ್ಭವವಾಗಿದ್ದರೆ ನಾವುಗಳು ಮಧ್ಯೆ ಪ್ರವೇಶ ಮಾಡಿ, ಕರ್ನಾಟಕದ ಹಕ್ಕುಗಳನ್ನು ರಕ್ಷಣೆ ಮಾಡಲೇಬೇಕಾಗಿರುತ್ತದೆ. ಇದರ ಬಗ್ಗೆ ನನ್ನ ಆಕ್ಷೇಪ ಇಲ್ಲ. ಈ ಘಟನೆ ಯಾವ ರೀತಿ ಉದ್ಭವವಾಯಿತು? ಅವರು ಹೇಳಿದ ರೀತಿಯಲ್ಲಿ ಉದ್ಭವವಾಗಿರ ಲಾರದೆಂದು ನನ್ನ ಭಾವನೆ. ಕರಾವಳಿ ಸಮೀಪದಲ್ಲಿ ಮೀನು ಹಿಡಿದರೆ, ಸಣ್ಣ ಮೀನುಗಾರರಿಗೆ ತೊಂದರೆಯಾಗುತ್ತದೆಂದು ಕಾನೂನು ಮಾಡಿದ್ದರೆ, ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆಯೆ? ಮಾಡಿದ್ದರೂ ಕೂಡ ಅದು ಕಾನೂನಿಗೆ ವಿರುದ್ಧವಾಗುವುದಿಲ್ಲ. ಇಲ್ಲಿ ಭಾಷೆ ಪ್ರಶ್ನೆ ಬರುವುದಿಲ್ಲ. ಆದರೆ, ಕೇರಳ ಸರ್ಕಾರ ಕ್ರಮ ತೆಗೆದುಕೊಂಡಿದ್ದು ಅಧಿಕ. ಈ ವಿಚಾರದಲ್ಲಿ ತೀವ್ರ ಕ್ರಮ ತೆಗೆದುಕೊಳ್ಳುವಂತ ಅವಶ್ಯಕತೆ ಇರಲಿಲ್ಲ, ಈ ವಿಚಾರದಲ್ಲಿ ಕೇರಳ ಸರ್ಕಾರ ಪರಿಹಾರ ಕೊಡತಕ್ಕ, ಬೋಟುಗಳನ್ನು ಬಿಟ್ಟು ಕೊಡತಕ್ಕ, ಹಾಗೂ ನಮ್ಮ ಶಾಸನ ಸಭೆಯ ಅಭಿಪ್ರಾಯವನ್ನು ಕೇರಳ ಸರ್ಕಾರಕ್ಕೆ ತಿಳಿಸುವ ವ್ಯವಸ್ಥೆ ಮಾಡಿ, ಕೂಡಲೇ ಪರಿಹಾರ ಹುಡುಕಬೇಕೆಂದು ನಾನು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ

2-30 P.M.

SRI P. F. RODRIGUES (Mangalore).—Mr. Speaker Sir, to my mind the whole problem is regional. On account of certain factors like the regulation which Kerala Government has got i.e., they want every fishing boat to be registered as far as they are concerned, boats which are fishing in their waters have been registered. Similar position is in vogue in Goa and Bombay. It is only we that do not have that regulation in Karnataka. If the boats which are not registered come to their water then they are taking action. Therefore, what I suggest is that we too have a regulation of that type in our own place in Karnataka and tell our friends-fishermen that if they want to go over, they should also register with them. If the registration takes place there is no problem. It is not the question of fishing within

certain limits. Of course, we have got a legislation. It is there. Purse-seine boats will have to go a certain distance away from the shore and then do the fishing. ದೂರ ಹೋಗದಿದ್ದರೆ ರಂಪನಿ ಬಲೆಯಿಂದ ಮೀನು ಹಿಡಿಯಲಿಕ್ಕೆ ತೊಂದರೆಯಾಗುತ್ತದೆ. ಕೇರಳದವರು ಮೀನು ಹಿಡಿಯಲಿಕ್ಕೆ ನಮ್ಮ ಸಮುದ್ರಕ್ಕೆ ಬಂದಿದ್ದಾರೆ. ನಮ್ಮವರು ಮೀನು ಹಿಡಿಯಲು ಹೋದಾಗ ಆತಂಕ ಮಾಡಿದ್ದಾರೆ. They have to go beyond. Similarly, what has happened is that because our boats are not registered in Kerala, this action must have been taken. Let us advise our fishermen that if they want to go to Kerala waters for fishing, let them register their boats. There may not be much difficulty. Similarly we can also bring a legislation here. It is already there and it has been drafted. Our boats should be registered. Everybody has got a right. ಸಮುದ್ರ ಜಗಳ ಮಾಡುವುದು ಬೇಡ. ಏನು ಆಗಿಲ್ಲ. Let us tell our fishermen to register if they are going to Kerala. Then, I think, things would improve.

ಶ್ರೀ ಕಾಪು ಸಂಜೀವಶೆಟ್ಟಿ.—ಅಧ್ಯಕ್ಷರೇ, ಮುಖ್ಯವಾಗಿ ನಮ್ಮ ದಕ್ಷಿಣ ಕನ್ನಡ ಭಾಗದಲ್ಲಿ ಮೀನಿನ ಅಭಾವವಿರುವುದರಿಂದ ಸ್ವಾಭಾವಿಕವಾಗಿ ನಮ್ಮ ಮೀನುಗಾರರು ಕೇರಳದ ಕಡೆ ಹೋಗುತ್ತಾರೆ ನಮ್ಮವರು ಆ ಕಡೆ ಹೋಗುತ್ತಾರೆ, ಅವರೂ ಕೂಡ ನಮ್ಮ ಕಡೆ ಬರುತ್ತಾರೆ. ಸರ್ಕಾರ ಸರ್ಕಾರದ ಮಧ್ಯೆ ತಿಕ್ಕಾಟವೇನು ಇಲ್ಲ. ಈಗ ಕೇರಳ ಸರ್ಕಾರದಲ್ಲಿ ದೋಣಿಗಳನ್ನು ರಿಜಿಸ್ಟರ್ ಮಾಡಿಸಿ ಮೀನು ಹಿಡಿಯುವ ಪದ್ಧತಿ ಇದೆ. ನಮ್ಮಲ್ಲಿ ಮಾರಿ ಬಲೆ ಮತ್ತು ರಂಪನಿ ಬಲೆಯವರು ಇದ್ದಾರೆ ಅವರೂ ರಿಜಿಸ್ಟರ್ ಮಾಡಿಸಿಲ್ಲ. ಹಿಂದಿನಿಂದಲೂ ಬಂದಂತೆ ಅವರು ಮೀನು ಹಿಡಿಯುವುದಕ್ಕೆ ಹೋಗಿದ್ದಾರೆ. ಕೇರಳದವರು ಆ ಸಮಯದಲ್ಲಿ ದೋಣಿಗಳ ಸಮೇತ ದಸ್ತಗಿರಿ ಮಾಡಿದ್ದಾರೆ. ಆದ್ದರಿಂದ ಇಡೀ ನಮ್ಮ ಜಿಲ್ಲೆಯ ವಾತಾವರಣ ಕಲುಷಿತವಾಗಿದೆ. ಅದನ್ನು ಒಳ್ಳೆಯ ರೀತಿಯಲ್ಲಿ ತೀರ್ಮಾನ ಮಾಡಿ ಮೀನುಗಾರರನ್ನು ಮತ್ತು ದೋಣಿಗಳನ್ನು ಬಿಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್. ಅಧ್ಯಕ್ಷರೇ, ಈಗಾಗಲೇ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಟ್ಟಿದ್ದೇನೆ. ಕೇರಳದವರು ಅವರ ಕಾನೂನು ಪ್ರಕಾರ ಹಾಗೆ ಮಾಡಿದ್ದಾರೆ. ಈ ಸನ್ನಿವೇಶದಲ್ಲಿ ನಮ್ಮ ಮೀನುಗಾರರನ್ನು ದಸ್ತಗಿರಿ ಮಾಡಿದ್ದಾರೆ ಮತ್ತು ಮೀನುಗಳನ್ನು ವಶಪಡಿಸಿಕೊಂಡಿದ್ದಾರೆ. ಇದರ ಜೊತೆಗೆ ನಮ್ಮ ಮೀನುಗಾರರು ಅವರ ಕಡೆಗೆ ಹೋದಾಗ ಅವರನ್ನು ದಸ್ತಗಿರಿ ಮಾಡಿ ದೋಣಿಗಳನ್ನು ವಶಪಡಿಸಿಕೊಂಡಿದ್ದಾರೆ. ಈ ವಿಷಯ ಗೊತ್ತಾದ ಮೇಲೆ ಸರ್ಕಾರದ ಅಧಿಕಾರಿಗಳು ಕೇರಳದವರ ಜೊತೆ ಸಂಪರ್ಕ ಬೆಳೆಸಿದ್ದಾರೆ. ಸಂಪರ್ಕ ಬೆಳೆಸಿ ಕಾರಣ ಕೇಳಿದ್ದಾರೆ. ಆದರ ಬಗ್ಗೆ ತಿಳಿಸಬೇಕಾದರೆ ಪೂರ್ತ ವಿಷಯ ತಿಳಿದುಕೊಂಡು ಈ ಸಭೆಗೆ ತಿಳಿಸಬೇಕು. ಎರಡನೆಯದಾಗಿ ಮೀನು ಹಿಡಿಯುವುದರಲ್ಲಿ, ಕೇರಳದವರಲ್ಲಿ ಒಂದು ಕಾನೂನು ಇದೆ, ಗೋವಾದವರಲ್ಲಿ ಒಂದು ಕಾನೂನು ಇದೆ, ಬೊಂಬಾಯಿಯಲ್ಲಿ ಒಂದು ಕಾನೂನು ಇದೆ. ನಮ್ಮಲ್ಲಿ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಬಹುಶ: ನಮ್ಮಲ್ಲಿ ಕಾನೂನನ್ನು ಮಾಡಬೇಕಾಗುತ್ತದೆ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಕಾನೂನನ್ನು ನಾವು ಮಾಡಿದ ಮೇಲೆ ದೋಣಿ ರಿಜಿಸ್ಟರ್ ಮಾಡಿಸಬೇಕು ಎನ್ನುವ ನಿಯಮ ಏನು ಇರುತ್ತದೆ ಆ ಒಂದು ನಿಬಂಧನೆಗೆ ಒಳಪಟ್ಟು ಯಾರು ಬೇಕಾದರೂ ವ್ಯವಸ್ಥೆ ಮಾಡಬಹುದು. ಏನೇನು ನಡೆದಿದೆ ಎನ್ನುವುದನ್ನು ವರದಿ ಬರದೆ ಹೇಳವುದಕ್ಕಾಗುವುದಿಲ್ಲ. ಕೇರಳ ಸರ್ಕಾರದಿಂದ ಪೂರ್ತಿ ವರದಿ ಬಂದಮೇಲೆ ನಮ್ಮ ಅಧಿಕಾರಿಗಳು ಹೋಗಿದ್ದಾರೆ ಅವರು ಮಾತುಕತೆ ನಡೆಸಿ ಮೀನುಗಾರರನ್ನು ಬಿಡಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ನಮ್ಮ ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳು ಕಾರ್ಯದರ್ಶಿಗಳು ಸಹ ಹೋಗಿ ಕೇರಳದವರ ಜೊತೆ ಚರ್ಚೆಮಾಡಿ ವಿಷಯವನ್ನು ಬಗೆಹರಿಸಬೇಕಾಗಿದೆ. ಈ ವಿಷಯದಲ್ಲಿ ಚರ್ಚೆಮಾಡಲಿಕ್ಕೆ ಅವಕಾಶ ಕೊಡಬೇಕಾಗುತ್ತದೆ. ಕೇರಳದವರು ಸಹ ಮೀನುಗಾರರಿಗೆ ಈ ಸಾರಿ ವಾರ್ನಿಂಗ್ ಕೊಟ್ಟು ಕಳುಹಿಸಬೇಕಾಗಿತ್ತು. It is all under investigation now, ಅವರ ಕಡೆಯವರು ಸಹ ನಮ್ಮ ಕಡೆಗೆ ಬರುತ್ತಾರೆ. ಸಮುದ್ರದಲ್ಲಿ ಮೀನು ಹಿಡಿಯುವಾಗ ನಮ್ಮ ಕಡೆಯವರು ಹೋಗಿರಬಹುದು. ಮೀನು ಹಿಡಿಯುವುದಕ್ಕೆ ಸಮುದ್ರಕ್ಕೆ ಹೋಗಬೇಡಿ ಎಂದರೆ ಹೇಗೆ ? ಇದನ್ನು ನಾವು ಪರಸ್ಪರ ಮಾತುಕತೆಯಿಂದ ಒಂದು ತಿಳುವಳಿಕೆಯಿಂದ

ಬಗೆಹರಿಸಬೇಕಾಗುತ್ತದೆ.....By mutual understanding we have to solve this problem, not by way of threat or by any other manner. ಮಾನ್ಯ ಸದಸ್ಯರಾದ ಬಾವಿಯವರು ಹೇಳಿದ ಹಾಗೆ ಉದ್ದೇಶಪೂರ್ವಕವಾಗಿ ತೊಂದರೆ ಮಾಡುತ್ತಾರೆಂದು ಭಾವಿಸಿಲ್ಲ. ಒಂದು ವೇಳೆ ಆ ತರಹ ನಮ್ಮ ಮಿನಿಸ್ಟರುಗಳಿಗೆ ತೊಂದರೆ ಕೊಡಬೇಕೆಂದು ಪ್ರಯತ್ನ ಮಾಡಿದ್ದರೆ, ಆ ವಿಷಯ ಸರ್ಕಾರಕ್ಕೆ ಗೊತ್ತಾದರೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಆ ರೀತಿ ನಾವು ಭಾವಿಸಿಕೊಂಡು ಹೇಳಂವುದು ಸರಿಯಲ್ಲ. ಈ ವಿಷಯವನ್ನು ಕೇಂದ್ರದವರೆಗೂ ತೆಗೆದು ಕೊಂಡು ಹೋಗಬೇಕಾಗಿಲ್ಲ. ಆ ರೀತಿ ಮಾಡಿದ್ದರೆ, ನಮಗಿಂತ ಅವರಿಗೆ ಕಷ್ಟ ಜಾಸ್ತಿ. ಕರ್ನಾಟಕದವರು ಕೇರಳದಲ್ಲಿ ಹೋಗಿ ಜೀವನ ಮಾಡುವವರು ಯಾರೂ ಇಲ್ಲ. ಕರ್ನಾಟಕದಲ್ಲಿ ಕೇರಳದವರು ಜೀವನ ಮಾಡುವವರ ಪರ್ಸೆಂಟ್ ಜಾಸ್ತಿ ಇದೆ. ಆ ರೀತಿ ಮಾಡಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ನಮ್ಮವರು ಮೀನು ಹಿಡಿಯಲು ಸಮುದ್ರದ ಒಳಗಡೆ ಹೋಗಿದ್ದಾರೆ. ಜನಸಂಖ್ಯೆಯ ಆಧಾರ ತೆಗೆದು ಕೊಂಡರೆ ನಮಗಿಂತ ಅವರಿಗೇ ಕಷ್ಟವಾಗುತ್ತದೆ, ಈ ವಿಷಯವನ್ನು ಮಾತುಕತೆಯಿಂದ ಬಗೆಹರಿಸಲು ಪ್ರಯತ್ನ ಮಾಡುತ್ತೇನೆ. ಅಧಿಕಾರಿಗಳು ಕೇರಳದವರ ಜೊತೆಯಲ್ಲಿ ಮಾತನಾಡಿದ್ದಾರೆ, ರಾಜ್ಯಮಟ್ಟದ ಉನ್ನತ ಅಧಿಕಾರಿಗಳನ್ನು ಸಹ ಕಳುಹಿಸಿ ಕೊಡುತ್ತೇನೆ. ಅದರಿಂದಲೂ ಸಾಧ್ಯವಾಗದಿದ್ದರೆ ನಮ್ಮ ಸಂಬಂಧಪಟ್ಟ ಮಂತ್ರಿಗಳನ್ನು ಕೇರಳಕ್ಕೆ ಕಳುಹಿಸಿ ಕೇರಳದ ಮಂತ್ರಿಗಳ ಜೊತೆ ಚರ್ಚೆಮಾಡಿ ಸೂಕ್ತ ಪರಿಹಾರವನ್ನು ಕಂಡುಹಿಡಿಯಬೇಕೆಂಬುದೇ ಸರ್ಕಾರದ ಉದ್ದೇಶವಾಗಿರುತ್ತದೆ. ಈ ರೀತಿ ಪ್ರಯತ್ನ ಮಾಡದೆ ಕೇಂದ್ರ ಸರ್ಕಾರಕ್ಕೆ ಕೇರಳ ಸರ್ಕಾರವನ್ನು ಡಿಸ್‌ಮಿಸ್ ಮಾಡಿ ಎಂದು ಹೇಳುವುದು ಸರಿಯಲ್ಲ. ಮಾನ್ಯ ಬಾವಿಯವರು ವಕೀಲರಾಗಿರಬಹುದು ಎಂದು ಕಾಣುತ್ತದೆ ಇಂಟರ್ ನ್ಯಾಷನಲ್ ಲಾ ಕೋಡ್ ೨ ಎ–ಬಿ ಎಂದು ಹೇಳುತ್ತಾ ಬಂದರು ಅದರ ಅವಶ್ಯಕತೆ ಇಲ್ಲ. ಒಂದು ವೇಳೆ ಕಾನೂನು ತಿಳಿಯದೆ ಮಾಡಿದ್ದರೆ ಇಂತಹವುಗಳನ್ನು ಮಾತುಕತೆಯಿಂದ ಒಟ್ಟಿಗೆ ಕುಳಿತು ಚರ್ಚೆಮಾಡಿ ಪರಿಹಾರ ಕಂಡುಹಿಡಿಯ ಬೇಕು. ಪೂರ್ತಿ ವರದಿ ಬಂದ ಮೇಲೆ ಪುನ: ವರದಿಯನ್ನು ಸದನದ ಮುಂದೆ ಇಡುತ್ತೇನೆ.

re : (ii) Indefinate fast undertaken by Doctors

MR. SPEAKER.—Now I request the Hon. Member Sri P. Ramdev to call the attention of the Minister for Health and Family Welfare to the situation that has arisen due to indefinite fast undertaken by Doctors.

ಶ್ರೀ ಪಿ. ರಾಮದೇವ್.—ಅಧ್ಯಕ್ಷರೆ, ವೈದ್ಯಕೀಯ ವಿದ್ಯಾರ್ಥಿಗಳ ಅನಿರ್ದಿಷ್ಟ ಉಪವಾಸದ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೆ, ನಾವೆಲ್ಲರೂ ಅದಕ್ಕೆ ಧ್ವನಿಗೂಡಿಸುತ್ತೇವೆ.

ಶ್ರೀ ಎ.ಕೆ. ಅಬ್ದುಲ್ ಸಮದ್ (ಆರೋಗ್ಯ ಮಂತ್ರಿಗಳು).

It is a fact that the junior doctors and the medical college students have been on a strike in the State since December 1980. Their strike against the permission granted by the Government to start the Kempegowda Medical College, Bangalore, and Dr. B R. Ambedkar Medical College, Bangalore, in addition, to the abolition of the capitation fee in the other private medical colleges where the system of collection of capitation fee exists.

2. As already stated on the floor of this House, by the Chief Minister discussion were held with the representatives of the striking students and the junior doctors to call of the strike so that, the committee that has already been constituted to go into